**ಇಂದು ದಿನಾಂಕ:*10.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : 1, 2 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ. ವಕೀಲರಿಂದಃ</u>**

ಈ ಕೇಸು ಸಲ್ಲಿಸಲು ನಾನು ಮತ್ತು ನನ್ನ ತಾಯಿ ಮಾಹಿತಿ ಕೊಟ್ಟಿದ್ದೇನೆ. ಈ ಕೇಸಿನ ವಾದಿ ನನ್ನ ತಾಯಿ ಎಂದರೆ ಸರಿ. ನನ್ನ ತಾಯಿ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ ಅವರ ಕಾಲಿಗೆ ಪೆಟ್ಟಾಗಿದ್ದು ಕಾಲಿನ ಬೆರಳು ಕಟ್ಟಾಗಿದೆ. ನನ್ನ ತಾಯಿ ಓಡಾಡಲು ಆಗುತ್ತಿಲ್ಲ ಆದ್ದರಿಂದ ನನಗೆ ಅಧಿಕಾರ ಪತ್ರ ಕೊಟ್ಟಿದ್ದಾರೆ. ನನ್ನ ತಾಯಿ ಆರೋಗ್ಯದ ಸಂಬಂಧ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದರೂ ಸಹ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಿದರೆ ನಿಜಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಕೆಲಸ ಮಾಡುತ್ತಿಲ್ಲ ಮನೆಯಲ್ಲಿಯೇ ಇದ್ದಾರೆ. ನನ್ನ ತಾಯಿ ಆದಾಯದ ಮೂಲ ಇರುವುದಿಲ್ಲ ಎಂದರೆ ಸರಿಯಲ್ಲ ಅವರ ಹೆಸರಿನಲ್ಲಿ ಹೊಟೇಲ್, 51 ಕೊಠಡಿಗಳು ಇರುವ ಪಿಜಿ ಮತ್ತು ಕಾಂಪ್ಲೆಕ್ಸ ಇದೆ. ನನ್ನ ತಾಯಿ ಆದಾಯ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಾಯಿಗೆ ಯಾವುದೇ ಆದಾಯದ ಮೂಲಗಳಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾನೊಬ್ಬನೇ ಗಂಡು ಮಗ, ಇಬ್ಬರು ಹೆಣ್ಣು ಮಕ್ಕಳು. ನನ್ನ ತಾಯಿ ಮತ್ತು ನಾನು ಒಟ್ಟಾಗಿದ್ದೇವೆ ಎಂದರೆ ಸರಿ. ಪ್ರತಿವಾದಿ 1, 2 ಮತ್ತು 4 ರವರು ಹೂಟಗಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. ದಾವಾ ಆಸ್ತಿ ಪ್ರತಿವಾದಿ 1, 2 ಮತ್ತು 4 ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಪ್ರತಿವಾದಿ 1, 2 ಮತ್ತು 4 ಮತ್ತು ಅವರ ಕುಟುಂಬದವರು ದಿನಾಂಕ 25.07.2018 ರಂದು ಆಸ್ತಿಗಳನ್ನು ನೊಂದಣಿ ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿ ಪ್ರತಿವಾದಿ

1, 2 ಮತ್ತು 4 ರವರ ಭಾಗಕ್ಕೆ ಜಂಟಿಯಾಗಿ ಬಂದಿದೆ ಎಂದರೆ ಸರಿ ಆ ನಂತರ ಅವರ ಹೆಸರಿಗೆ ಜಂಟಿಯಾಗಿ ಖಾತೆ ಬಂದಿದೆ ಎಂದರೆ ಸರಿಯಲ್ಲ ಆದರೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮಾತ್ರ ಇತ್ತು. ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವ ದಾಖಲೆ ಪ್ರಕಾರ ಪ್ರತಿವಾದಿ 1, 2 ಮತ್ತು 4 ರವರ ಜಂಟಿ ಹೆಸರಿನಲ್ಲಿ ಖಾತೆಯಾಗಿದೆ ಎಂದರೆ ದಾವಾ ಆಸ್ತಿಗಳು ಖಾತೆಯಾಗಿವೆ ಎಂದರೆ ನಾವು ಕ್ರಯದ ಕರಾರು ಪತ್ರ ಮಾಡಿಸಿಕೊಳ್ಳುವಾಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಮಾತ್ರ ಖಾತೆ ಇತ್ತು. ಆ ಮೂರು ಜನರ ಹೆಸರಿನಲ್ಲಿ ಖಾತೆ ಇದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1, 2, 4 ಮತ್ತು 2 ನೇ ಪ್ರತಿವಾದಿ ಹೆಂಡತಿ ದಿನಾಂಕ 01.01.2022 ರಂದು ನೊಂದಣಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಈ ವಿಷಯ ನಾವು ಕೇಸು ಹಾಕಿದ ನಂತರ ತಿಳಿಯಿತು. ಆ ಮೂರು ಜನರು ವಿಭಾಗ ಮಾಡಿಕೊಂಡಿದ್ದ ವಿಷಯ ನನಗೆ ಮೊದಲೇ ಗೊತ್ತಿತ್ತು ಎಂದರೆ ಸುಳ್ಳು. ದಿನಾಂಕ 01.01.2022 ರ ನೊಂದಣಿ ವಿಭಾಗ ಪತ್ರದ ಪ್ರಕಾರ ದಾವಾ ಐಟಂ ನಂಬರ್ 1 ರಲ್ಲಿ 1 ನೇ ಪ್ರತಿವಾದಿಗೆ 6 ಗುಂಟೆ ಹಾಗೂ ದಾವಾ ಐಟಂ ನಂಬರ್ 2 ರ ಆಸ್ತಿಯಲ್ಲಿ 4 ಗುಂಟೆ ಬಂದಿದೆ ಎಂದರೆ ಮೋಸದಿಂದ ವಿಭಾಗ ಪತ್ರ ಮಾಡಿಕೊಂಡಿದ್ದಾರೆ. ಅದೇ ರೀತಿ 4 ನೇ ಪ್ರತಿವಾದಿಗೆ ದಾವಾ ಐಟಂ ನಂಬರ್ 1 ರಲ್ಲಿ 14 ಗುಂಟೆ ಹಾಗೂ ದಾವಾ ಐಟಂ ನಂಬರ್ 2 ರ ಆಸ್ತಿಯಲ್ಲಿ 12 ಗುಂಟೆ ಬಂದಿದೆ ಎಂದರೆ ಗೊತ್ತಿಲ್ಲ. ಆ ನಂತರ ದಾವಾ ಆಸ್ತಿಯ ಸ.ನಂ.73/3 ಸ.ನಂ. 73/19 ಆಗಿದೆ ಹಾಗೂ 73/4 ರ 73/20 ಎಂದು ಆಗಿದೆ ಎಂದರೆ ಮೋಸದಿಂದ ಮಾಡಿಸಿಕೊಂಡಿದ್ದಾರೆ. ಪ್ರತಿವಾದಿ 1, 2 ಮತ್ತು 4 ರವರು ನನ್ನ ಸಂಬಂಧಿಕರು. ನಾನು ಬಡ್ಡಿ ವ್ಯವಹಾರ ಮತ್ತು ಚೀಟಿ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸುಳ್ಳು. ಆ ಕಾರಣದಿಂದ ಪ್ರತಿವಾದಿ 1 ಮತ್ತು 2 ರವರು 2016-17 ರ 1 ವರ್ಷದ ಅವಧಿಯಲ್ಲಿ 3 ಕಂತುಗಳ ಪ್ರಕಾರ 1 ನೇ ಕಂತಿನಲ್ಲಿ 1, ಲಕ್ಷ, 2 ನೇ

ಕಂತಿನಲ್ಲಿ 2,50,000 ಮತ್ತು 3 ನೇ ಕಂತಿನಲ್ಲಿ 1,50,000/- ರಂತೆ ಒಟ್ಟು 5 ಲಕ್ಷ ಕೈ ಸಾಲ ಪಡೆದುಕೊಂಡಿದ್ದರು ಅದಕ್ಕೆ ನಾನು ಶೇ.5 ರಷ್ಟು ಬಡ್ಡಿ ಕೊಡುವಂತೆ ಕೇಳಿಕೊಂಡಿದ್ದೆ ಎಂದರೆ ಸುಳ್ಳು. ಆ ನಂತರ 2017-19 ರವರೆಗೆ ಬಡ್ಡಿ ಹಣ ಪಾವತಿಸಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳು ನನ್ನಿಂದ ಪಡೆದ ಸಾಲದ ಭದ್ರತೆಗಾಗಿ ಆನ್ ಡಿಮ್ಯಾಂಡ್ ಪ್ರೋನೋಟ್ ಮತ್ತು ಸಾಲ ಪತ್ರ ಬರೆದುಕೊಡುವಂತೆ ಪ್ರತಿವಾದಿ 1 ಮತ್ತು 2 ರವರಿಗೆ ಕೇಳಿದ್ದಾಗ ನಾನು 4 ಖಾಲಿ ಚೆಕ್ಕುಗಳನ್ನು ಕೊಡುವಂತೆ ಕೇಳಿದ್ದೆ ಎಂದರೆ ಸುಳ್ಳು. ಅದರಂತೆ 2 ನೇ ಪ್ರತಿವಾದಿ ಹೆಸರಿನಲ್ಲಿರುವ ಗುಂಗ್ರಾಲ್ ಛತ್ರ ಶಾಖೆಯ ಕೆನರಾ ಬ್ಯಾಂಕ್ ಗೆ ಸೇರಿದ 4 ಚೆಕ್ಕುಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು. 2 ನೇ ಪ್ರತಿವಾದಿ ನನ್ನಿಂದ ಹಣ ಪಡೆದುಕೊಳ್ಳುವ ಕಾಲಕ್ಕೆ ಟ್ಯಾಕ್ಸಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. 2020-21 ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಾಮಿಕ ಕಾಯಿಲೆ ಇತ್ತು ಎಂದರೆ ಸರಿ. ಸದರಿ ಅವಧಿಯಲ್ಲಿ ಪ್ರತಿವಾದಿಗಳು ನನಗೆ ಬಡ್ಡಿ ಪಾವತಿಸಲು ಸಾಧ್ಯವಾಗಲಿಲ್ಲ ಎಂದರೆ ಸುಳ್ಳು. ಆನಂತರ ಪ್ರತಿವಾದಿಗಳ ಮನೆಯ ಹತ್ತಿರ ಹೋಗಿ ಗಲಾಟೆ ಮಾಡಿದ್ದೇನೆ ಎಂದರೆ ಸರಿಯಲ್ಲ ಆದರೆ ಅವರ ಮನೆಯ ಹತ್ತಿರ ಹೋಗಿ ಕ್ರಯ ಪತ್ರ ನೊಂದಣಿ ಮಾಡಿಕೊಡುವಂತೆ ಕೇಳಿದ್ದೇನೆ. 2019 ರಲ್ಲಿ ನಾನು ಗ್ರಾಮ ಪಂಚಾಯಿತಿ ಉಪಾಧ್ಯಕ್ಷನಾಗಿದ್ದೆ. ನಾನು ಉಪಾಧ್ಯಕ್ಷನಾಗಿದ್ದ ಕಾರಣ ನನ್ನ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಎಂದರೆ ಸುಳ್ಳು. ಆನಂತರ ಪ್ರತಿವಾದಿ 1 ಮತ್ತು 2 ರವರನು ಭೇಟಿ ಮಾಡಿ ನನ್ನ ಹೆಸರಿಗೆ ಒಂದು ನಂಬಿಕೆ ಕರಾರು ಪತ್ರ ಬರೆದುಕೊಂಡಿ ನಂತರ ವಾಪಸ್ಸು ಬರೆದುಕೊಡುವುದಾಗಿ ಕೇಳಿದ್ದೆ ಎಂದರೆ ಸುಳ್ಳು. ಆದ್ದರಿಂದ ನನ್ನ ಮೇಲಿನ ನಂಬಿಕೆಯಿಂದ ಪ್ರತಿವಾದಿಗಳು ದಾವಾ ಆಸ್ತಿಗಳ ಸಂಬಂಧ ನಂಬಿಕೆ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು. ವಾದ ಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಗಳು ದಾವಾ

ಆಸ್ತಿಗಳನ್ನು ರೂ.14,00,000/– ಗೆ ಒಪ್ಪಿಕೊಂಡಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯ ಸಂಬಂಧ ಪ್ರತಿವಾದಿಗಳು ಯಾವುದೇ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ ಹಾಗೂ ನನ್ನಿಂದ ಮುಂಗಡ ಹಣವಾಗಿ ರೂ.12,00,000/– ಪಡೆದುಕೊಂಡಿಲ್ಲ ಎಂದರೆ ಸುಳ್ಳು. ಅಕ್ರಮ ಲಾಭ ಹೊಂದಲು ಪ್ರತಿವಾದಿಗಳ ವಿರುದ್ಧ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿಗಳಿಂದ ಭದ್ರತೆಗಾಗಿ ಪಡೆದುಕೊಂಡಿದ್ದ ಚೆಕ್ಕುಗಳ ಪೈಕಿ ಮೈಸೂರಿನ ನ್ಯಾಯಾಲಯದಲ್ಲಿ ಸಿಸಿ ನಂಬರ್ 2645/2022 ರಲ್ಲಿ ಕೇಸು ಹಾಕಿದ್ದೇನೆ ಎಂದರೆ ಭದ್ರತೆಗಾಗಿ ಪಡೆದುಕೊಂಡಿರಲಿಲ್ಲ ಆ ಕೇಸಿನಲ್ಲಿ ನನ್ನ ಪರವಾಗಿ ತೀರ್ಪು ಆಗಿದೆ. ಪ್ರತಿವಾದಿ 3 ಮತ್ತು 4 ರವರು ಬಸಲಾಪುರದಲ್ಲಿ ವಾಸವಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಅದು ಅವರ ಸ್ವಂತ ಊರು ಆದ್ದರಿಂದ ಆ ರೀತಿ ಬರೆಸಿದ್ದೇನೆ. ಅವರಿಬ್ಬರು ಮೂಲತಃ ಹೂಟಗಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಅಲ್ಲಿಗೂ ಬಂದು ಹೋಗುತ್ತಾರೆ. ದಾವಾ ಆಸ್ತಿ ಪ್ರತಿವಾದಿ 1, 2 ಮತ್ತು 4 ರವರ ಜಂಟಿ ಹೆಸರಿನಲ್ಲಿ ಖಾತೆ ಇದ್ದರು ಸಹ 4 ನೇ ಪ್ರತಿವಾದಿಯನ್ನು ಹೊರತುಪಡಿಸಿ ಪ್ರತಿವಾದಿ 1 ಮತ್ತು 2 ರವರಿಂದ ಮಾತ್ರ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ 4 ನೇ ಪ್ರತಿವಾದಿಯನ್ನು ಕ್ರಯ ಪತ್ರ ನೊಂದಣಿಯಾಗುವ ಕಾಲಕ್ಕೆ ಸಹಿ ಮಾಡಿಸಿಕೊಡುತ್ತೇವೆ ಎಂದು ಪ್ರತಿವಾದಿ 1 ಮತ್ತು 2 ರವರು ಹೇಳಿದ್ದಾರೆ. ಆ ರೀತಿ ಅವರು ಯಾವುದೇ ಹೇಳಿಕೆ ಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟೀಸು ಕಳುಹಿಸುವ ತನಕ 4 ನೇ ಪ್ರತಿವಾದಿಗೆ ಕರಾರು ಪತ್ರ ಆಗಿರುವ ವಿಚಾರ ಅಥವಾ ಹಣ ಕೊಟ್ಟಿರುವ ವಿಚಾರ ಗೊತ್ತಿರಲಿಲ್ಲ ಎಂದರೆ ಸುಳ್ಳು. ನಾಲ್ಕಾರು ಬಾರಿ ಹೋಗಿ ಕೇಳಿದ್ದೇನೆ. 4 ನೇ ಪ್ರತಿವಾದಿ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿಗೆ ಹಿಸ್ಸೆಗೆ ಹೋಗಿರುವ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ಪ್ರತಿವಾದಿ 1 ಮತ್ತು 2 ರವರು ಬರೆದುಕೊಟ್ಟಿರುವ

ಕರಾರು 4 ನೇ ಪ್ರತಿವಾದಿಯನ್ನು ಬಾಧ್ಯಗೊಳಿಸುವುದಿಲ್ಲ ಎಂದರೆ ಸುಳ್ಳು. ಪ್ರತಿವಾದಿ 1 ಮತ್ತು 2 ರವರು 4 ನೇ ಪ್ರತಿವಾದಿ ಕಾನೂನುಬದ್ದ ಅವಶ್ಯಕತೆಗಾಗಿ ಹಣ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು. ಕ್ರಯದ ಕರಾರು ಪತ್ರವನ್ನು ನಾನೇ ತಯಾರಿಸಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿ 1 ಮತ್ತು 2 ರವರು ಬರೆಸಿಕೊಟ್ಟಿದ್ದಾರೆ. ಕ್ರಯದ ಕರಾರು ಪತ್ರಕ್ಕೆ ನಾನು 2 ನೇ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಕರಾರು ಪತ್ರ ಆದ ದಿನ ಪ್ರತಿವಾದಿಗಳಿಗೆ ರೂ.12,00,000/- ಮುಂಗಡ ಹಣವನ್ನು ಕೊಟ್ಟಿಲ್ಲ ಎಂದರೆ ರೂ.9,00,000/- ಮಾತ್ರ ಕೊಟ್ಟಿದ್ದೇನೆ ಪತ್ರ ಆಗುವ ಮೊದಲು ರೂ.3,00,000/- ಹಣವನ್ನು ಪಡೆದುಕೊಂಡಿದ್ದರು. ಪ್ರತಿವಾದಿಗಳಿಗೆ ಹಿಂದೆ ಯಾವ ಯಾವ ದಿನಾಂಕದಂದು ಹಣ ಕೊಟ್ಟಿದ್ದೇನೆ ಎಂದು ನೆನಪಿಲ್ಲ. ಪ್ರತಿವಾದಿಗೆ ರೂ.12,00,000/- ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯನ್ನು ಆ ನಂತರ ಕರೆದುಕೊಂಡು ಬಂದು ಸಹಿ ಹಾಕಿಸಿ ಕೊಡುವುದಾಗಿ ಪ್ರತಿವಾದಿ 1 ಮತ್ತು 2 ರವರು ಹೇಳಿರುವುದನ್ನು ಕರಾರು ಪತ್ರದಲ್ಲಿ ಹೇಳಿಲ್ಲ. 4 ನೇ ಪ್ರತಿವಾದಿಗೆ ನೋಟೀಸು ಕೊಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ಮಾತ್ರ ನೋಟೀಸು ಕೊಡಿಸಿದ್ದೇನೆ. ಪ್ರತಿವಾದಿಗಳಿಗೆ ನೋಟೀಸು ಜಾರಿಯಾಗದಂತೆ ನಾನೇ ತಡೆ ಹಿಡಿದು ನೋಡಿಕೊಂಡಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯ ಪೈಕಿ 1 ಗುಂಟೆ ಜಮೀನಿಗೆ ಈಗ ರೂ.3,00,000/- ಬೆಲೆ ಬಾಳುತ್ತದೆ ಎಂದರೆ ಸುಳ್ಳು. ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವ ಕರಾರು ಪತ್ರವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. 2 ವರ್ಷದೊಳಗೆ ದಾಖಲೆಗಳನ್ನು ಪೂರೈಸಿ ಕ್ರಯ ಪತ್ರ ಬರೆದುಕೊಡುವುದಾಗಿ ಪ್ರತಿವಾದಿಗಳು ಒಪ್ಪಿಕೊಂಡಿರುವುದಿಲ್ಲ ಎಂದರೆ ಸುಳ್ಳು.

**PW-02**

ನನ್ನ ತಾಯಿ ಆದಾಯ ತೆರಿಗೆ ಪಾವತಿದಾರರಾಗಿದ್ದಾರೆ. ಕರಾರು ಪತ್ರದ ಮೂಲಕ ಕೊಟ್ಟಿರುವ ಮುಂಗಡ ಹಣದ ಬಗ್ಗೆ ಆದಾಯ ತೆರಿಗೆ ಲೆಕ್ಕಪತ್ರದಲ್ಲಿ ತಿಳಿಸಿಲ್ಲ. ನನ್ನ ತಾಯಿಯ ಹತ್ತಿರ ಯಾವುದೇ ಹಣ ಇರಲಿಲ್ಲ ಹಾಗೂ ಪ್ರತಿವಾದಿಗಳಿಗೆ ಹಣ ಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**